ಹೊನ್ನಟ್ಟಾಲಯ್ಯ ಕಂಡಿರಲಿಲ್ಲ. ಬೆಳಗಿನಿಂದ ತನ್ನನ್ನು ಕ್ಯಾರೆಕೆತ್ತ ಅನ್ನದಿದ್ದರೂ ಹೊನ್ನಟ್ಟಾಲಯ್ಯನಿಗೆ ಅಡವಪ್ಪನನ್ನು ಹಂಗೆ ಒಂಟಿಯಾಗಿ ಬಿಟ್ಹೋಗಲು ಮನಸೊಪ್ಪದೆ ಸ್ವಾಧೀನವಿಲ್ಲದ ಕೈ ಕಾಲುಗಳನ್ನು ದುಸ್ಸಾಹಸಪಟ್ಟು ಅಡ್ವವಪ್ಪ ಕೂತಿದ್ದ ಕೋಡುಗಲ್ಲಿನ ತಡಿಯಲ್ಲಿದ್ದ ದುಂಡು ಬಂಡೆಯೊಂದನ್ನು ಹತ್ತಿ ಕೂತ. ಆಗವನಿಗೆ ಹಿಂಬದಿಯಿಂದ ಅಡವಪ್ಪ ತಳ ಒಡೆದ ಗುಡಾಣವೊಂದನ್ನು ಕೋಡುಗಲ್ಲಿನ ನೆತ್ತಿಗೆ ಮಕಾಡೆ ಕವುಚಿದಂತೆ ಭಾಸವಾಗುತ್ತಿದ್ದ. ಹಿಂಗೆ ಮೌನದ ಎದ್ದಾಟವಿದ್ದ ಅಲ್ಲಿ ತಣ್ಣಗೆ ತೀಡುತ್ತಿದ್ದ ಗಾಳಿಯಲ್ಲಿ ಕೋಡುಗಲ್ಲಿನ ಎದುರಿಗಿದ್ದ ಮುರುಕಲು ಮಾವಿನ ಮರದ ಹರುಕಲು ಕೊಂಬೆಯೊಂದರಲ್ಲಿ ಕೆಂಭೂತವೊಂದು ಇವರಿಬ್ಬರನ್ನೂ ದಿಟ್ಟಿಸುತ್ತಾ ಕೂತಿತ್ತು. ಕಾವಳದಿಂದ ತೋಯ್ದೋಗಿದ್ದ ಗಿಡಗಂಟೆಗಳು ಬಿಸಿಲಿಗೆ ಪುಳಕಗೊಳ್ಳುತ್ತಾ ಮೈ ಮುರಿಯುತ್ತಿದ್ದವು. ಹೊನ್ನಟ್ಟಾಲಯ್ಯ ಕಾದೇ ಕಾದ. ಹೊಟ್ಟೆ ಚುರುಗುಟ್ಟತೊಡಗಿತ್ತು. ನಿನ್ನೆ ರಾತ್ರಿ ಆ ಘಟನೆಯನ್ನು ಕಾಣುತ್ತಲೇ ಹೊಟ್ಟೆಗೆ ಕವಳ ಕಾಣಿಸಬೇಕು ಅನ್ನೋದೇ ಮರೆತೋಗಿತ್ತು. ಅಡವಪ್ಪನ ಕಡೆಯಿಂದ ಸುತರಾಂ ಮಾತುಟ್ಟಲಿಲ್ಲ. ಪುಣ್ಯಾತ್ಮ ಕೂತಲ್ಲಿಂದಲೂ ಸರುಕಾಡಲಿಲ್ಲ. ಹಿಂಗೇ ಬಿಟ್ಟರೆ ಇವತ್ತೆಲ್ಲಾ ಇಲ್ಲೇ ಗೋವಿಂದ ಅಂದುಕೊಂಡ ಹೊನ್ನಟ್ಟಾಲಯ್ಯ, 'ಇಂಗೇ ಅದೇಟೊತ್ತಿನ್ ತನ್ಕ ಕೂತ್ಕಾಬೇಕು ಅಂದ್ಕಂಡುದೀಯಾ?' ಅಂದ ತುಸು ಜೋರಾಗಿ. ಅವನಾ ಮಾತುಗಳು ಪಕ್ಕದಲ್ಲಿದ್ದ ಕೊರಕಲೊಳಗಿಂದ ಮೆಲ್ಲಗೆ ಪ್ರತಿಧ್ವನಿಸಿದ್ದು ಬಿಟ್ಟರೆ ಅಡವಪ್ಪ ಜಪ್ಪಯ್ಯ ಅನ್ನಲಿಲ್ಲ. ತನ್ನ ಜೀವದ ಸಖ ಅಧ್ಯಾತ್ಮದ ಗುರು ಹಿಂಗೆ ಮಾತಿಲ್ಲದೆ ಕತೆಯಿಲ್ಲದೆ ಕೂತಿರುವುದು ಹೊನ್ನಟ್ಟಾಲಯ್ಯನೊಳಗೆ ಸಂಕಟವನ್ನಿಟ್ಟಾಡಿಸಿತು. 'ಅಲ್ಲಾ ಎಲ್ಲಾದ್ಲೂ ಒಂದ್ ದಾರಿ ಇದ್ದೇ ಇರುತ್ತಪ್ಪ ಅದುನ್ನ ಹುಡುಕ್ಕಾಣಾದ ಬುಟ್‌ಬುಟ್ ಇಂಗೆ ಕಲ್ನಂಗೆ ಕೂತ್ಕಂಡ್ರೆ ಆಗುತ್ತಾ ಹೇಳು?' ಅಡವಪ್ಪನ ಮೌನವನ್ನು ಹೆಂಗಾದರೂ ಮಾಡಿ ಖತಂ ಮಾಡುವ ಪಣ ತೊಟ್ಟವನಂತೆ ಪುನರಪಿ ಪುಸುಲಾಯಿಸಿದ. ಆಗೊಂದು ರವೋಟು ಅಡವಪ್ಪನ ಮೈ ಮಿಸುಕಾಡಿ ಮೆಲ್ಲಗೆ ಹೊನ್ನಟ್ಟಾಲಯ್ಯನತ್ತ ತಿರುಗಿತು. ಆಗವನ ಮುಖದಲ್ಲಾಡುತ್ತಿದ್ದ ನೋವಿನ ಭಾವ ಹೊನ್ನಟ್ಟಾಲಯ್ಯನನ್ನು ಹಿಡಿದು ಕುಕ್ಕಿತು. ಆದರಾ ನೋವಿನ ಭಾವವಿದ್ದೆಡೆಯಲ್ಲಿ ಕ್ರಮೇಣ ರೋಷ ಮಡುಗಟ್ಟತೊಡಗಿತು. ಅಡವಪ್ಪನ ಮುಖದಂಥ ಮುಖವೆಲ್ಲಾ ಕೆಂಪಗಾಯಿತು. ಏನನ್ನೋ ಒದರುವ ಸಲುವಾಗಿ ಅದುರಿದ ತುಟಿಗಳು ಮತ್ತೆ ಬಿಗಿತುಕೊಂಡವು. ಮಾತೊಗೆದರೆ ಎದೆಯ ಬೇಗುದಿ ತುಸು ತಗ್ಗುತ್ತೆ ಅಂಬೋ ಹೊನ್ನಟ್ಟಾಲಯ್ಯನ ಆಸೆಯನಲ್ಲಿಗೇ ತುಂಡಾಕಿದವನಂತೆ ಮರಳಿ ಮುಂಚಿನಂತೆ ಕೂತ ಅಡವಪ್ಪ ಎದುರಿನ ಅನಂತವನ್ನೇ ದಿಟ್ಟಿಸತೊಡಗಿದ. ಆದರಾ ಸೋಲನ್ನೊಪ್ಪಲು ಬಿಲ್ಕುಲ್ ಸಿದ್ಧನಿಲ್ಲ ಎಂಬಂತೆ ಹೊನ್ನಟ್ಟಾಲಯ್ಯ, 'ಇದ್ಕೆಲ್ಲಾ ಕಾರಣ ಆ ಓಚಯ್ಯ ಸುಂದ್ರೇಶ. ಅವುನ್ನೇನಾರ ನಿಲಾಕ್ದೇ ಹೋದ್ರೆ ಊರುನ್ನೋದು ಕೆಟ್ಟು ಕ್ಯರ ಹಿಡ್ಡೋಗುತ್ತೆ, ಸಾಲದ್ದಕ್ಕೆ ಎದ್ರೂ ಬಿದ್ರೂ ಕೆಮ್ಮಿದ್ಕೆ ಕ್ಯಾಕರ್ಸಿದ್ಕೆಲ್ಲಾ ನಿಂತಾವ್ಲೇ ನಾಯಿಯಂಗೆ ಬಾಲ ಅಳ್ಳಾಡಿಸ್ಕೆಂಡಿದ್ದ ಆ ಸಾಬೀನೂ ಇವ್ರ ತಾಳುಕ್ಕೆ ಕುಣ್ದವ್ನೆ ಅಂದ್ರೆ! ಯಾರುನ್ನ ನಂಬಾದೋ ಯಾರುನ್ನ ಬಿಡಾದೋ ಸಿವ್ನೇ,' ಮಾತಿನಲ್ಲೇ ಗಿಂಟಿದ.

ಅಡವಪ್ಪನ ಆಕೃತಿ ಮತ್ತೆ ಮೆಲ್ಲಗೆ ಹೊಳ್ಳಿತು. 'ನಿಂಗನಿಸಿದಂತೆ ನಂಗೂ ಅನ್ಸಿಲ್ಲ ಅಂದ್ಕಂಡಿದೀಯೇನೋ ಬಕ್ರ?' ಅಂತಂದುಕೊಂಡ ಅಡವಪ್ಪ ಹೊನ್ನಟ್ಟಾಲಯ್ಯನನ್ನೇ ದಿಟ್ಟಿಸಿದ. ಆ ಚಣದ ಅವನ ಮುಖಭಾವ ತಾನಾಡಿದ ಮಾತುಗಳಿಗೆ ಸಮ್ಮತಿಯೋ ನಿರಾಕರಣೆಯೋ ಇಲ್ಲಾ ನಿರ್ಲಿಪ್ತತೆಯೋ ಎಂಬುದೇನೊಂದನ್ನೂ ಎಟಕಿಸಿಕೊಳ್ಳದವನಾದ ಹೊನ್ನಟ್ಟಾಲಯ್ಯ ಗೊಂದಲದಲಿ ಮುಳುಗೇಳುತಿರಲು ಅವರಿಬ್ಬರ ಹಿಂದೆ ಅಲ್ಲೇ ಅನತಿ ದೂರದಲ್ಲಿದ್ದ ಹಸಿರಂಥ ಹಸಿರನ್ನೆಲ್ಲಾ ನೊರಕಂಡು ಕೆಂಡದಂಥ ಕೆಂಪು ಹೂಗಳಾದವೇನೋ ಎಂಬಂತೆ ಮೈತುಂಬಾ ಮೆತ್ತಿಕೊಂಡಿದ್ದ ಮುತ್ತುಗದ ಮರದ ಹೂವುಗಳ ಕೆಂಪಾತಿ ಕೆಂಪಿನಲ್ಲಿ ಸೂರ್ಯ ಕೂಡಾಡುತ್ತಿದ್ದ. ಆಗ ಇದ್ದಕ್ಕಿದ್ದಂತೆ ಅಡವಪ್ಪ ಕೂತಲ್ಲಿಂದ